ಆರ್.ಎ.64-2024
ಪಿ.ಡಬ್ಲ್ಯೂ-1
ಸಾಕ್ಷಿಗೆ ಇಂದು ದಿನಾಂಕ. 27-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಪಾಟೀಸವಾಲು ಎದುರುದಾರರ ಪರ ವಕೀಲರಿಂದಃ**

ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಈವರೆಗೆ ಯಾವುದೇ ವೈದ್ಯಾಧಿಕಾರಿಗಳು ಚಾಲಕನಾಗಿ ಕೆಲಸ ಮಾಡಬೇಡ ಎಂದು ವೈದ್ಯಕೀಯ ದಾಖಲೆ ನೀಡಿರುವುದಿಲ್ಲ, ಆದರೆ ಈ ಪ್ರಕರಣದಲ್ಲಿ ನನ್ನ ಆರೋಗ್ಯದ ಕುರಿತಾಗಿ ಇದ್ದ ದಾಖಲಾತಿ ನಾನು ಹಾಜರುಮಾಡಿರುತ್ತೇನೆ. ನನ್ನ ಮತ್ತು ಎದುರುದಾರರ ನಡುವೆ ಸುಮಾರು ಆರು ಪ್ರಕರಣಗಳು ದಾಖಲು ಇವೆ ಎಂದರೆ ಸರಿ. ಸದರಿ ಆರು ಪ್ರಕರಣಗಳಲ್ಲಿ ಮೂರು ಪ್ರಕರಣಗಳು ಈಗಾಗಲೇ ತೀರ್ಪು ಆಗಿದೆ ಎಂದರೆ ಸಾಕ್ಷಿಯು ನನ್ನ ಮೇಲೆ ಕೇವಲ ಎರಡು ಪ್ರಕರಣಗಳು ಮಾತ್ರ ಇವೆ, ಅವು ಮುಗಿದಿಲ್ಲ ಎಂದು ನುಡಿದಿರುತ್ತಾರೆ. ನಾನು ನ್ಯಾಯಾಲಯದಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರರು ನನ್ನ ವಿರುದ್ಧ 2021 ರಲ್ಲಿ ಸಿಜೆಎಂ ನ್ಯಾಯಾಲಯದಲ್ಲಿ ಸಿಸಿ ನಂ.195/2021 ರಂತೆ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ದಿಃ 03-02-2023 ರಂದು ನನ್ನ ವಿರುದ್ಧ ತೀರ್ಪು ಬಂದಿದೆ ಎಂದರೆ ಸರಿ. ಸದರಿ ತೀರ್ಪಿನ ವಿರುದ್ಧ ನಾನು ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ಅಪೀಲು ಕೂಡ ನನ್ನ ವಿರುದ್ಧ ಆಗಿರುತ್ತದೆ ಎಂದರೆ ಸರಿ.

ಅಲ್ಲದೇ ಎದುರುದಾರರು ನನ್ನ ವಿರುದ್ಧ 3 ನೇ ಅಪರ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವಾ ನಂ.119/2023 ರಂತೆ ದಾವಾ ದಾಖಲಿಸಿದ್ದು, ಅದು ನಮ್ಮ ವಿರುದ್ಧ ಡಿಕ್ರಿಯಾಗಿದೆ ಎಂದರೆ ಸರಿಯಲ್ಲ. ನಾನು ಈ ಅಪೀಲನ್ನು ಯಾವ ಪ್ರಕರಣದ ವಿರುದ್ಧ ದಾಖಲಿಸಿದ್ದೀಯಾ ಎಂಬ ಪ್ರಶ್ನೆಗೆ ಸಾಕ್ಷಿಯು ತಾನು ಚೆಕ್ ಬೌನ್ಸ್ ಪ್ರಕರಣದಲ್ಲಿ ಅಪೀಲು ದಾಖಲಿಸಿದ್ದೇನೆ ಎಂದು ನುಡಿದಿರುತ್ತಾರೆ. ನನಗೆ ಈ ಅಪೀಲನ್ನು ಯಾವ ಉದ್ದೇಶಕ್ಕಾಗಿ ಹಾಕಿದ್ದೇನೆ ಎಂದು ಖುದ್ದು ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನಗೆ ವಿಚಾರಣಾ ನ್ಯಾಯಾಲಯದಲ್ಲಿ ನ್ಯಾಯ ಸಿಕ್ಕಿಲ್ಲ ಎಂಬ ಕಾರಣಕ್ಕೆ ಹಾಕಿದ್ದೇನೆ ಎಂದು ನುಡಿದಿರುತ್ತಾರೆ.

ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಎದುರುದಾರನ ವಿರುದ್ಧ ಕ್ರಿಮಿನಲ್ ರಿವಿಜನ್ ಪಿಟೀಶನ್ 1679/2023 ರಂತೆ ದಿಃ 12-12-2023 ರಂದು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಎದುರುದಾರರು ಮಾನ್ಯ ಉಚ್ಚ ನ್ಯಾಯಾಲಯದ ಎದುರು ಹಾಜರು ಆಗಿದ್ದಾರೆ ಎಂದರೆ ಸರಿ. ನಾನು ಸಲ್ಲಿಸಿದ ಸದರಿ ಕ್ರಿಮಿನಲ್ ರಿವಿಜನ್ ಪಿಟೀಶನ್ ಕುರಿತಾಗಿ ಈಗಾಗಲೇ ಆದೇಶ ಆಗಿದೆ ಎಂದರೆ ಸಾಕ್ಷಿಯು ಅದು ಈಗಲೂ ನಡೆಯುತ್ತಿದೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಈಗ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ನೆಟ್ ಪ್ರತಿಯನ್ನು ತೋರಿಸಲಾಗಿದ್ದು, ಸಾಕ್ಷಿಯು

ಅದನ್ನು ತನ್ನ ಬಳಿ ಓದಲು ಸಾಧ್ಯ ಆಗುತ್ತಿಲ್ಲ ಎಂದು ನುಡಿದಿದ್ದು, ಸಾಕ್ಷಿಯ ಪರ ವಕೀಲರು ಸದರಿ ದಾಖಲೆಯನ್ನು ನೋಡಿ ಸದರಿ ಪ್ರಕರಣ ಇನ್ನು ವಿಚಾರಣೆಯಲ್ಲಿ ಇರುವುದು ಕಂಡುಬರುತ್ತಿದೆ ಎಂದು ನುಡಿದಿದ್ದು, ಸದರಿ ದಾಖಲೆಯನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಕೂಡ ನನಗೆ ಯಾವುದೇ ಮೂಳೆ ಮುರಿತ ಉಂಟಾದ ಗಾಯಗಳು ಕಂಡುಬರುತ್ತಿಲ್ಲ ಎಂದು ದಿಃ 18-04-2024 ರ ಆದೇಶದಲ್ಲಿ ಹೇಳಿದೆ ಎಂದರೆ ಸಾಕ್ಷಿಯು ಅಲ್ಲಿಯೂ ಕೂಡ ತಾನು ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿದಿರುತ್ತಾರೆ. ತದನಂತರ ಮಾನ್ಯ ಉಚ್ಚ ನ್ಯಾಯಾಲಯವು ನನ್ನ ರಿವಿಜನ್ ಪಿಟೀಶನ್ ದಾಖಲೆಗಳನ್ನು ಪರಿಶೀಲಿಸಿ ನನಗೆ 50% ಚೆಕ್ ಅಮೌಂಟನ್ನು ವಿಚಾರಣಾ ನ್ಯಾಯಾಲಯದಲ್ಲಿ ಡಿಪೋಸಿಟ್ ಮಾಡುವಂತೆ ಆದೇಶ ಮಾಡಿದೆ ಎಂದರೆ ಸಾಕ್ಷಿಯು ಸದರಿ ಆದೇಶದಂತೆ ತಾನು 50% ಹಣವನ್ನು ಡಿಪೋಸಿಟ್ ಮಾಡಿದ್ದೇನೆ ಎಂದು ನುಡಿದಿರುತ್ತಾರೆ.

ನಾನು ಈ ನ್ಯಾಯಾಲಯದಲ್ಲಿ 215 ದಿನಗಳ ವಿಳಂಬದ ಕುರಿತಾಗಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯಲ್ಲಿ ನಾನು ನನ್ನ ಕರ್ತವ್ಯದ ದಿನಚರಿಯನ್ನು ಹಾಜರುಪಡಿಸಿರುತ್ತೇನೆ. ಓರ್ವ ವ್ಯಕ್ತಿಯು ತನಗೆ ಆರೋಗ್ಯ ಸರಿ ಇಲ್ಲ ಎಂದು ಸಾಬೀತು ಪಡಿಸಲು ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಬೇಕಾಗುತ್ತದೆ ಎಂದರೆ ಸಾಕ್ಷಿಯು ತಾನು ಕೂಡ ವೈದ್ಯಕೀಯ ದಾಖಲೆ ಹಾಜರುಪಡಿಸಿದ್ದೇನೆ ಎಂದು ನುಡಿದಿರುತ್ತಾರೆ. ನಾನು ನನ್ನ ಆರೋಗ್ಯಕ್ಕೆ ಸಂಬಂಧಿಸಿ ಯಾವುದೇ ವೈದ್ಯಕೀಯ ದಾಖಲಾತಿ ಹಾಜರುಪಡಿಸದೇ ಇದ್ದರೂ ಕೂಡ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ನಿ.ಪಿ.1 ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನಮ್ಮ ಇಲಾಖೆಯ ಮೇಲಾಧಿಕಾರಿಗಳ ಜೊತೆ ಸಂಚು ಮಾಡಿ ನಿ.ಪಿ.1 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರ ಪ್ರಕಾರ ನಾನು ಜನವರಿ 2024 ರಿಂದ ಮೇ 2024 ರವರೆಗಿನ ಹಾಜರಿ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿ.

ನಾನು ದಿಃ 16-10-2024 ರಂದು ಈ ಅಪೀಲು ದಾಖಲಿಸಿದ್ದೇನೆ ಎಂದರೆ ಸರಿ. ನನಗೆ 02-05-2024 ರಂದು ಹಾಗೂ ಅದರ ಮರುದಿನ ಅಪೀಲು ದಾಖಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ತನಗೆ ಆರೋಗ್ಯ ಸರಿ ಇರಲಿಲ್ಲ ಎಂದು ನುಡಿದಿರುತ್ತಾರೆ. ನಾನು ದಿಃ 01-01-2024 ರಿಂದ ಈ ಅಪೀಲು ದಾಖಲಿಸುವವರೆಗೂ ನಾನು ಉದ್ಯೋಗಕ್ಕೆ ಹೋಗಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ತಾನು ಮಧ್ಯ ಮಧ್ಯದಲ್ಲಿ ಕೆಲಸಕ್ಕೆ ಹೋಗಿದ್ದೇನೆ ಎಂದು ನುಡಿದಿರುತ್ತಾರೆ. ನಾನು ಅಪೀಲು ದಿನಾಂಕದವರೆಗಿನ ಹಾಜರಿಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ನಿಜ ಅಂಶ ತಿಳಿದುಬರುತ್ತದೆ ಎಂದು ಕೇವಲ ನಿ.ಪಿ.1 ನ್ನು ನಮ್ಮ ಮೇಲಾಧಿಕಾರಿಗಳ ಜೊತೆ

ಮಿಲಾಪೆಯಾಗಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು ನೀಡಿದವರನ್ನು ವಿಚಾರಣೆಗೊಳಪಡಿಸಿದರೆ ಮಾತ್ರ ಅದರ ಸತ್ಯಾಸತ್ಯತೆ ತಿಳಿದುಬರುತ್ತದೆ ಎಂದರೆ ಸರಿ.

ಈ ಪ್ರಕರಣವನ್ನು ಹೊರತುಪಡಿಸಿ ಎದುರುದಾರ ನನ್ನ ಮೇಲೆ ಹಾಕಿದ ಪ್ರಕರಣದಲ್ಲಿ ಹಾಗೂ ನಾನು ಎದುರುದಾರನ ಮೇಲೆ ಹಾಕಿದ ಪ್ರಕರಣಗಳ ಪ್ರತಿನಿತ್ಯದ ಮಾಹಿತಿಯನ್ನು ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿ. ಮೂಲ ದಾವಾ 119/2023 ರ ತೀರ್ಪಿನ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಮೂಲದಾವಾ 119/2023 ರಲ್ಲಿ ವಿಚಾರಣಾ ನ್ಯಾಯಾಲಯ ನನಗೆ ತಕರಾರನ್ನು ಸಲ್ಲಿಸಲು ಬಹಳಷ್ಟು ಸಮಯ ನೀಡಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಸಾಕಷ್ಟು ಬಾರಿ ರಾಜಿ ಮಾಡಿಕೊಳ್ಳುತ್ತೇನೆ ಎಂದು ಸಮಯ ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿಯು ಸರಿ ಎಂದು ನುಡಿದು, ಆದರೆ ಎದುರುದಾರ ಒಪ್ಪಿರುವುದಿಲ್ಲ ಎಂದು ನುಡಿದಿರುತ್ತಾರೆ.

ನಾನು ನನ್ನ ಅಪೀಲು ಮೆಮೋದಲ್ಲಿ ನಾನು ತೀರ್ಪಿನ ದೃಢೀಕೃತ ನಕಲನ್ನು ಪಡೆದುಕೊಳ್ಳಲು ದಿಃ 01-02-2024 ರಂದು ಅರ್ಜಿ ಸಲ್ಲಿಸಿದ್ದು, ನನಗೆ ದಿಃ 12-02-2024 ರಂದು ಅದರ ದೃಢೀಕೃತ ನಕಲು ನನ್ನ ವಕೀಲರಿಗೆ ದೊರೆತಿದೆ ಎಂದು ಬರೆದಿದ್ದೇನೆ ಎಂದರೆ ಸರಿ. ಅದೇ ದಿನ ನನಗೂ ಕೂಡ ಅದರ ವಿಚಾರ ತಿಳಿದುಬಂದಿರುತ್ತದೆ ಎಂದರೆ ಸರಿ. ನನಗೆ ಯಾವುದೇ ಗಂಭೀರ ಖಾಯಿಲೆ ಇಲ್ಲದೇ ಇದ್ದರೂ ಕೂಡ ಎದುರುದಾರನಿಗೆ ತೊಂದರೆ ನೀಡಬೇಕು ಎಂಬ ಉದ್ದೇಶದಿಂದ ಈ ಅಪೀಲು ದಾಖಲಿಸಿದ್ದು ವಿಳಂಬಕ್ಕೆ ಯಾವುದೇ ಸೂಕ್ತ ಕಾರಣಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೋರಿಕೊಂಡ ಪರಿಹಾರ ಪಡೆಯಲು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಾಗಿದೆ

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

ಆರ್.ಎ.64-2024
ಪಿ.ಡಬ್ಲ್ಯೂ-1
ಸಾಕ್ಷಿಗೆ ಇಂದು ದಿನಾಂಕ. 15-07-2025 ರಂದು ಪ್ರಮಾಣವಚನ ಬೋಧಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆಃ ಅಪೀಲುದಾರರ ಪರ ವಕೀಲರಿಂದ.

ಸಾಕ್ಷಿಯು ಅಮಲ್ಜಾರಿ ನಂ.39-2024 ರ ಆದೇಶದ ಪುಟಗಳ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು.

ಪಾಟೀಸವಾಲು ಎದುರುದಾರರ ಪರ ವಕೀಲರಿಂದಃ

(ಈ ಹಂತದಲ್ಲಿ ಎದುರುದಾರ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಾಗಿದೆ

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

ಆರ್.ಎ.64-2024
ಪಿ.ಡಬ್ಲ್ಯೂ-1
ಸಾಕ್ಷಿಗೆ ಇಂದು ದಿನಾಂಕ. 26-06-2025 ರಂದು ಪ್ರಮಾಣವಚನ ಬೋಧಿಸಲಾಯಿತು.
ಮಧ್ಯಂತರ ಅರ್ಜಿ ಸಂಖ್ಯೆ: 1 ರ ಮೇಲೆ ವಿಚಾರಣೆ.
ಮುಖ್ಯ ವಿಚಾರಣೆಃ ಅಪೀಲುದಾರರ ಪರ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಅಂಶಗಳನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಪ್ರಮಾಣ ಪತ್ರದ ಜೊತೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ಪರಿಗಣಿಸಬೇಕಾಗಿ ಕೋರಿಕೊಳ್ಳುತ್ತಿದ್ದೇನೆ.

1. ನಾನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ದಾವಣಗೆರೆ ವಿಭಾಗ ಘಟಕ -1 ರಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದು, ಆ ಕುರಿತು 01-01-2024 ರಿಂದ 01-05-2024 ರವರೆಗಿನ ಹಾಜರಾತಿ ವಿವರದ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದೇನೆ. ಈ ಹಂತದಲ್ಲಿ ಸದರಿ ದಾಖಲೆಗೆ ಎದುರುದಾರ ವಕೀಲರು ಆಕ್ಷೇಪಣೆ ವ್ಯಕ್ತಪಡಿಸಿದ್ದು, ಸದರಿ ದಾಖಲೆಯನ್ನು ರುಜುವಾತು ಪಡಿಸುವ ಹೊಣೆಗಾರಿಕೆಯ ಮೇರೆಗೆ ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಈ ದಾಖಲೆಗಳ ಆಧಾರದ ಮೇಲಿಂದ ನನ್ನ ವಿಳಂಬ ಅರ್ಜಿಯನ್ನು ಮನ್ನಿಸಬೇಕಾಗಿ ಕೋರಿಕೊಳ್ಳುತ್ತಿದ್ದೇನೆ.

(ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಾಗಿದೆ

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.